**ದಿನಾಂಕಃ 16.03.2021 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಪಾಟೀ–ಸವಾಲುಃ1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಡಿ.ಜಿ.ಜಿ ವಕೀಲರಿಂದಃ–**

1 ರಿಂದ 3 ನೇ ಪ್ರತಿವಾದಿಗಳ ತಂದೆಯ ಹೆಸರು ಸಣ್ಣ ಹನುಮಂತಪ್ಪ. ಸಣ್ಣ ಹನುಮಂತಪ್ಪನವರ ತಾಯಿಯ ಹೆಸರು ತೋಪಮ್ಮ. ಸಣ್ಣ ಹನುಮಂತಪ್ಪ ಬುರ್ಜೆ ಮಲ್ಲಪ್ಪನವರ ಹಿರಿಯ ಹೆಂಡತಿಯ ಮಗ. ಬುಡ್ಡಿ ಕೆಂಚಪ್ಪ, ಸಂಜೀವಪ್ಪ ಹಾಗೂ ಓಬಣ್ಣ ಬುರ್ಜೆ ಮಲ್ಲಪ್ಪನವರ 2 ನೇ ಹೆಂಡತಿಯ ಮಕ್ಕಳು ಎಂದರೆ ಸರಿ. ನನ್ನ ತಂದೆ ಓಬಣ್ಣನವರ ತಾಯಿಯ ಹೆಸರು ಕೆಂಚಮ್ಮ. ಓಬಣ್ಣನವರ ತಾಯಿ ಕೆಂಚಮ್ಮ ಎಂದು ತೋರಿಸಲು ಕ್ರಯಪತ್ರ ಇದೆ ಹಾಗೂ ಮತದಾರರ ಪಟ್ಟಿ ಇದೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಕ್ರಯಪತ್ರದಲ್ಲಿ ಈ ವಿಚಾರ ನಮೂದು ಇದೆ.

ಬುರ್ಜೆ ಮಲ್ಲಪ್ಪನವರಿಗೆ ಸರ್ವೆ ನಂಬರ್ಃ368 ರಲ್ಲಿ 5 ಎಕರೆ 9 ಗುಂಟೆ ಜಮೀನು ಇದೆ ಹಾಗೂ ಸರ್ವೆ ನಂಬರ್ಃ53/1 ರಲ್ಲಿ 39 ಗುಂಟೆ ನೀರಾವರಿ ಜಮೀನು, ಸರ್ವೆ

ನಂಬರ್‍ಃ151/1 ಪಿ1 ರಲ್ಲಿ 5 ಎಕರೆ 8 ಗುಂಟೆ ಜಮೀನು ಹಾಗೂ ಒಂದು ಮನೆ ಹೇಮದಳ ಗ್ರಾಮದಲ್ಲಿ ಇದೆ. ಸದರಿ ಮನೆಯ ಖಾತೆ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಮನೆ ಚಿಕ್ಕದು ಇರುವುದರಿಂದ ಅದನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ.

ನನ್ನ ತಾತ ಬುರ್ಜೆ ಮಲ್ಲಪ್ಪನವರನ್ನು ನಾನು ನೋಡಿರುವುದಿಲ್ಲ. ಬುರ್ಜೆ ಮಲ್ಲಪ್ಪನವರು ತನ್ನ ಮಕ್ಕಳಿಗೆ ಆಸ್ತಿಗಳನ್ನು ವಿಭಾಗ ಮಾಡಿಕೊಟ್ಟಿರುವುದಿಲ್ಲ. ನಮ್ಮ ತಾತ ಎಲ್ಲಿ ತೀರಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಬುರ್ಜೆ ಮಲ್ಲಪ್ಪನವರು ತೀರಿಕೊಂಡ ನಂತರ ಅವರ ಮಕ್ಕಳು ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವುದಿಲ್ಲ. ಬುರ್ಜೆ ಮಲ್ಲಪ್ಪನವರಿಗೆ ಸರ್ವೆ ನಂಬರ್‍ಃ151/2 ರಲ್ಲಿ 5 ಎಕರೆ 12 ಗುಂಟೆ ಜಮೀನು, ಸರ್ವೆ ನಂಬರ್‍ಃ262 ರಲ್ಲಿ 5 ಎಕರೆ 8 ಗುಂಟೆ ಜಮೀನು, ಸರ್ವೆ ನಂಬರ್‍ಃ368 ರಲ್ಲಿ 5 ಎಕರೆ 8 ಗುಂಟೆ ಜಮೀನು ಮತ್ತು ಸರ್ವೆ ನಂಬರ್‍ಃ53/1 ಬಿ ರಲ್ಲಿ 39 ಗುಂಟೆ ಜಮೀನು ಹೇಮದಳ ಗ್ರಾಮದಲ್ಲಿ ಇವೆ ಎಂದರೆ ಸರಿ.

ಈ ಎಲ್ಲಾ ಆಸ್ತಿಗಳನ್ನು 1963 ರಲ್ಲಿ ಬುರ್ಜೆ ಮಲ್ಲಪ್ಪನವರ ಮೊದಲನೆ ಹೆಂಡತಿಯ ಮಗನಾದ ಸಣ್ಣ ಹನುಮಪ್ಪನವರ ಮರಣ ನಂತರ ಅವರ 2 ನೇ ಹೆಂಡತಿಯ ಮಕ್ಕಳಾದ ಸಂಜೀವಪ್ಪ ಮತ್ತು ಓಬಣ್ಣನವರು ಸೇರಿ ಸಣ್ಣ ಈರಜ್ಜಗಳ ದೊಡ್ಡಮಲ್ಲಪ್ಪನವರ ಮಗ ಸಿದ್ದಣ್ಣನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಯಾವುದೇ ಆಸ್ತಿಗಳು ಮಾರಾಟ ಆಗಿಲ್ಲ ಎಂದು ಹೇಳುತ್ತಾರೆ. ದಿನಾಂಕಃ02.12.1963 ರಲ್ಲಿ ಸಂಜೀವಪ್ಪ ಮತ್ತು ಓಬಣ್ಣ ಸಿದ್ದಣ್ಣನವರಿಗೆ ನೋಂದಣಿ ಕ್ರಯಪತ್ರದ ಮೂಲಕ ಸದರಿ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಬುರ್ಜೆ ಮಲ್ಲಪ್ಪನವರ ಮೊದಲನೆ ಹೆಂಡತಿಯ ಮಗನಾದ ಸಣ್ಣ ಹನುಮಂತಪ್ಪನವರ ಮಕ್ಕಳಿಗೆ ಆಸ್ತಿಯಲ್ಲಿ ಯಾವುದೇ ಭಾಗ ಹೋಗಬಾರದು ಎಂದು ಸದರಿ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ಆಸ್ತಿಗಳನ್ನು ಸಂಜೀವಪ್ಪ ಮತ್ತು ಓಬಣ್ಣ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೋಂದಣಿ ಕ್ರಯಪತ್ರ ಮಾಡಿದ್ದರೂ ಸಹ ಸಣ್ಣ ಹನುಮಂತಪ್ಪ ಹಾಗೂ ಸಣ್ಣ ಹನುಮಂತಪ್ಪನವರ

ಮಕ್ಕಳು ಪ್ರತಿವಾದಿ 1 ರಿಂದ 3 ರವರು ಸದರಿ ಆಸ್ತಿಗಳ ಸ್ವಾಧೀನದಲ್ಲಿದ್ದರು ಎಂದರೆ ಸಾಕ್ಷಿ ನನ್ನ ತಂದೆ ಹಾಗೂ ಪ್ರತಿವಾದಿಗಳೆಲ್ಲರೂ ಸದರಿ ಆಸ್ತಿಗಳಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದು ಹೇಳುತ್ತಾರೆ.

1988 ರಲ್ಲಿ ಹನುಮಂತಪ್ಪ ಹಾಗೂ ಅವರ ಮಕ್ಕಳು ನಾವುಗಳು ಈ ಆಸ್ತಿಗಳನ್ನು ಮಾರಾಟ ಮಾಡಿಲ್ಲ ಎಂದು ಸಂಜೀವಪ್ಪ ಮತ್ತು ಓಬಣ್ಣನವರ ವಿರುದ್ಧ ಪಂಚಾಯಿತಿ ಮಾಡಿದ್ದರು ಎಂದರೆ ಸರಿ. ಸದರಿ ಪಂಚಾಯಿತಿಯಲ್ಲಿ ಸಣ್ಣ ಹನುಮಂತಪ್ಪ 1 ರಿಂದ 3 ನೇ ಪ್ರತಿವಾದಿಗಳು ಹಾಗೂ ಬುಡ್ಡಿ ಕೆಂಚಪ್ಪನವರ ಮಕ್ಕಳಾದ ತಿಪ್ಪೇಸ್ವಾಮಿ ಹಾಗೂ ಹನುಮಂತಪ್ಪನವರು ಸೇರಿದ್ದರು ಎಂದರೆ ಸರಿ. ಸದರಿ ಪಂಚಾಯಿತಿಯಲ್ಲಿ ಸರ್ವೆ ನಂಬರ್ಃ 151/2 ರಲ್ಲಿ 5 ಎಕರೆ 12 ಗುಂಟೆ ಹಾಗೂ ಸರ್ವೆ ನಂಬರ್ಃ262 ರಲ್ಲಿ 5 ಎಕರೆ 8 ಗುಂಟೆ ಜಮೀನನ್ನು ಖರೀದಿದಾರರಾದ ಸಿದ್ದಣ್ಣನವರಿಗೆ ಬಿಟ್ಟುಕೊಡಬೇಕೆಂದು ಹಾಗೂ ದಾವಾ ಆಸ್ತಿಗಳನ್ನು ಸಣ್ಣ ಹನುಮಂತಪ್ಪನವರ ಮಕ್ಕಳಾದ ಪ್ರತಿವಾದಿ 1 ರಿಂದ 3 ರವರಿಗೆ ಹಾಗೂ ಬುಡ್ಡಿ ಕೆಂಚಪ್ಪನವರ ಮಕ್ಕಳಾದ ತಿಪ್ಪೇಸ್ವಾಮಿ ಹಾಗೂ ಹನುಮಂತಪ್ಪನವರಿಗೆ ಬಿಟ್ಟುಕೊಡಲಾಯಿತು ಎಂದರೆ ಸಾಕ್ಷಿ ನಮ್ಮೆಲ್ಲರಿಗೂ ಸಿಕ್ಕಿತ್ತು ಎಂದು ಹೇಳುತ್ತಾರೆ.

ಸದರಿ ಪಂಚಾಯಿತಿಯ ವಿಚಾರವಾಗಿ ದಿನಾಂಕಃ27.12.1988 ರಂದು ಒಂದು ಕರಾರು ಪತ್ರ ಮಾಡಲಾಯಿತು ಎಂದರೆ ಸರಿ. ಸದರಿ ಕರಾರು ಪತ್ರದಂತೆ ಎಂ.ಆರ್ ನಂಃ12/1989-90 ಮ್ಯುಟೇಶನ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕರಾರು ಪತ್ರದಂತೆ ದಾವಾ ಆಸ್ತಿಗಳನ್ನು ಪ್ರತಿವಾದಿ 1 ರಿಂದ 3 ರವರು ಹಾಗೂ 4 ಮತ್ತು 5 ನೇ ಪ್ರತಿವಾದಿಗಳ ಗಂಡನಾದ ತಿಪ್ಪೇಸ್ವಾಮಿ ಹಾಗೂ 6 ಮತ್ತು 7 ನೇ ಪ್ರತಿವಾದಿಗಳ ಗಂಡನಾದ ಹನುಮಂತಪ್ಪನವರು ವ್ಯವಸಾಯ ಮಾಡಿಕೊಂಡು ಅನುಭವದಲ್ಲಿದ್ದರು ಎಂದರೆ ಸಾಕ್ಷಿ ನಾವೆಲ್ಲರೂ ಅನುಭವದಲ್ಲಿದ್ದೆವು ಎಂದು ಹೇಳುತ್ತಾರೆ. ಈಗಲೂ ಸಹ ದಾವಾ ಆಸ್ತಿಗಳನ್ನು 1 ರಿಂದ 3 ಹಾಗೂ 4,6 ಮತ್ತು 7 ನೇ ಪ್ರತಿವಾದಿಗಳು ಅನುಭವದಲ್ಲಿದ್ದು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನಾವೆಲ್ಲರೂ ಅನುಭವದಲ್ಲಿದ್ದೇವೆ ಎಂದು ಹೇಳುತ್ತಾರೆ. ಸದರಿ

ಕ್ರಯ ಪತ್ರದಂತೆ ಪ್ರತಿವಾದಿ 1 ರಿಂದ 4, 6 ಮತ್ತು 7 ನೇ ಪ್ರತಿವಾದಿಗಳು ಮಾಲೀಕರು ಮತ್ತು ಅನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ-ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.